# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

**ದಿನಾಂಕ: 20.08.2022 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ರಂಗನಾಥ್ ಬಿ.ಆರ್ ನೋಡಲ್ ಅಧಿಕಾರಿ, ವಾರ್ಡ್ 70 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ರಂಗನಾಥ್ ಬಿ.ಆರ್ | ನೋಡಲ್ ಅಧಿಕಾರಿ–ವಾರ್ಡ್ ನಂ.70 |
| 2 | ಶ್ರೀ ಅವೀಶ್ ಹೆಚ್ ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 70 |
| 3 | ಕೆ.ಶಿವಲಿಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಟಿ ಶೇಖರ್ | ಕಂದಾಯ ಪರಿವೀಕ್ಷಕರು |
| 5 | ತ್ರಿವೇಣಿ ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಜೆ ನರಸಿಂಹಮೂರ್ತಿ | ದ್ವಿ ದ ಸ |
| 7 | ರಂಗರಾಜು | ಸದಸ್ಯರು |

–:ನಡಾವಳಿಯ ವರದಿ:–

- ಕಾರ್ಯದರ್ಶಿಗಳಾದ ಶ್ರೀ ಅವೀಶ್ ಹೆಚ್ ಎಂ ಮಾತನಾಡುತ್ತಾ ಸಭೆಗೆ ಹಾಜರಾದನೋಡಲ್ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತಕೋರಿದರು.

**ವಿಷಯ ಸಂಖ್ಯೆ: 1:– ಪಾದಚಾರಿ ಮಾರ್ಗಗಳಲ್ಲಿನ ಕಟ್ಟಡ ನಿರ್ಮಾಣ & ಪೈಪುಗಳನ್ನು ತೆರವುಗೊಳಿಸುವ ಬಗ್ಗೆ**

ನೋಡಲ್ ಅಧಿಕಾರಿಗಳು ಮಾತನಾಡಿ, ಮಾನ್ಯ ಮುಖ್ಯ ಆಯುಕ್ತರು 17–08–2022ರಂದು ಕಛೇರಿ ಆದೇಶ ನೀಡಿದ್ದು, ದಿನಾಂಕ:21/08/2022ರ ಒಳಗೆ ಪಾದಚಾರಿ ಮಾರ್ಗಗಳಲ್ಲಿನ ಕಟ್ಟಡ ನಿರ್ಮಾಣ & ಪೈಪುಗಳನ್ನು ತೆರವುಗೊಳಿಸುವಂತೆ ಮತ್ತು ಪ್ರಧಾನ ಅಭಿಯಂತರರಿಗೆ ವರದಿ ನೀಡಲು ಸೂಚಿಸಿರುತ್ತಾರೆ. ಅದರಂತೆ ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ತಿಳಿಸಿದರು.

ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ, ಈಗಾಗಲೇ ದೊಡ್ಡಣ್ಣ ಇಂಡಸ್ಟ್ರಿಯಲ್ ಮುಖ್ಯರಸ್ತೆ ಹಾಗೂ ರಾಮಯ್ಯ ಬಡಾವಣೆ ಮುಖ್ಯರಸ್ತೆಗಳಲ್ಲಿ ತೆರವುಗೊಳಿಸುತ್ತಿದ್ದು, ದಿನಾಂಕ:21/08/2022ರೊಳಗೆ ತೆರವುಗೊಳಿಸಿ ವರದಿ ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

**ವಿಷಯ ಸಂಖ್ಯೆ: 2 :– ರಸ್ತೆ ಗುಂಡಿಗಳ ಬಗ್ಗೆ**

ನೋಡಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ 70ರ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬಿದ್ದ ಮಳೆಯಿಂದ ರಸ್ತೆಗುಂಡಿಗಳು ಹೆಚ್ಚಾಗಿದ್ದು, ಜೆ.ಎಂ.ಸಿ ರವರಿಂದ ವೆಟ್ ಮಿಕ್ಸ್ ಹಾಗೂ ಬಿ.ಸಿ ಪಡೆದುಕೊಂಡು ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮವಹಿಸಲು ಸೂಚಿಸಿದರು.

ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ, ಈಗಾಗಲೇ ವೆಟ್ ಮಿಕ್ಸ್ ತುಂಬುವ ಕಾರ್ಯ ನಡೆಯುತ್ತಿದ್ದು, ಮಳೆ ಬಿಡುವು ಕೊಟ್ಟ ನಂತರ ಜೆ.ಎಂ.ಸಿ ರವರಿಂದ ಬಿ.ಸಿಯನ್ನು ಪಡೆದು ರಸ್ತೆಗುಂಡಿಗಳನ್ನು ಮುಚ್ಚಲಾಗುವುದೆಂದು ತಿಳಿಸಿದರು.

**ವಿಷಯ ಸಂಖ್ಯೆ: 3 :- ಬೆಸ್ಕಾಂ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಬಗ್ಗೆ**

ಸದಸ್ಯರಾದ ರಂಗರಾಜು ರವರು ಮಾತನಾಡಿ, ಕಸ್ತೂರಿ ಬಡಾವಣೆಯ 4ನೇ ಅಡ್ಡರಸ್ತೆಯಲ್ಲಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕೋರಿದರು.

ನೋಡಲ್ ಅಧಿಕಾರಿರವರು ಬೆಸ್ಕಾಂ ಸಹಾಯಕ ಅಭಿಯಂತರರಿಗೆ ದೂರವಾಣಿ ಮೂಲಕ ಮಾತನಾಡಿ ಈ ಕೂಡಲೇ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಸೂಚಿಸಿದರು.

**ವಿಷಯ ಸಂಖ್ಯೆ: 4 :- ಲಸಿಕಾಕರಣದ ಬಗ್ಗೆ**

ಕೆ.ಶಿವಲಿಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಇಲ್ಲಿಯವರೆಗಿನ ಲಸಿಕಾಕರಣದ ವಿವರಗಳನ್ನು ಸಭೆಯಲ್ಲಿ ತಿಳಿಸಿದರು. ವಿವರ ಈ ಕೆಳಕಂಡಂತಿದೆ.

*18+ years*
1st dose – 63420 2nd dose - 67174

*15-17years*
1st dose – 1252 2nd dose - 1202

*12-14 years*
1st dose – 1235 2nd dose - 1055

*Case details*
Positive cases- 3311 Covid death - 5 (79) Active cases – 6
Home isolation -6 Hospitalised- 0

**ವಿಷಯ ಸಂಖ್ಯೆ: 5:-BBMP SAHAYA APP:**

- ಅವೀಶ್ ಹೆಚ್ ಎಂ, ಸಹಾಯಕ ಅಭಿಯಂತರರು, ವಾರ್ಡ್ ನಂ.70 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.
- ಶಿವಲಿಂಗಯ್ಯ.ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ಮಾತನಾಡಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟ ದೂರುಗಳನ್ನು ಪರಿಹರಿಸಲಾಗಿದೆ ಹಾಗೂ ಯಾವುದೇ ಸಮಸ್ಯೆ ಬಾಕಿ ಇರುವುದಿಲ್ಲ ಎಂದು ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ಮತ್ತು ಸದಸ್ಯರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡ್ ನಂ.70ರ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಅವೀಶ್ ಹೆಚ್.ಎಂ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ಮತ್ತು ಸದಸ್ಯರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ 70, ರಾಜಗೋಪಾಲ ನಗರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ ಸಮಿತಿ ಅಧ್ಯಕ್ಷರು**
**ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ**
**ವಾರ್ಡ್ ನಂ.70, ರಾಜಗೋಪಾಲ ನಗರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ